ಕರ್ನಾಟಕ ಸರ್ಕಾರ
ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.
E-mail:Commissioner.pue@gmail.com. Ph. No.23361857, 23361858* Fax-23361852

ಸಂಖ್ಯೆ: ಪಪೂಶಿಇ/ಆಡಳಿತ-1/GPL/ಸಿಆರ್-01/ಪ್ರಾ.ವರ್ಗ/01/2022-23 ದಿನಾಂಕ: 14-10-2022

# ಜ್ಞಾಪನ

**ವಿಷಯ:-** 2022-23ನೇ ಸಾಲಿನಲ್ಲಿ ನಡೆಯುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳ ಸಾಮಾನ್ಯ ವರ್ಗಾವಣೆ ಕೌನ್ಸೆಲಿಂಗ್‌ಗಾಗಿ ತಾತ್ಕಾಲಿಕ ಖಾಲಿ ಹುದ್ದೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ದಿನಾಂಕ ವಿಸ್ತರಿಸುವ ಬಗ್ಗೆ.

**ಉಲ್ಲೇಖ:-**
1. ಈ ಕಚೇರಿ ಸಂಖ್ಯೆ ಜ್ಞಾಪನ ಸಂಖ್ಯೆ: ಪಪೂಶಿಇ/ಆವಿಎ/ಉ.ವರ್ಗ/01/2022-23 ದಿನಾಂಕ:18-05-2022.
2. ಈ ಕಚೇರಿ ಸಮ ಸಂಖ್ಯೆ ಜ್ಞಾಪನ ದಿನಾಂಕ: 01/10/2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳ 2022-23ನೇ ಸಾಲಿನ ಸಾಮಾನ್ಯ ವರ್ಗಾವಣೆ ಕೌನ್ಸೆಲಿಂಗ್‌ಗಾಗಿ ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಉಲ್ಲೇಖ(01) ರನ್ವಯ ಅವಕಾಶ ಕಲ್ಪಿಸಲಾಗಿದೆ. ಉಲ್ಲೇಖ(02) ರನ್ವಯ ದಿನಾಂಕ: 01/10/2022 ರಂದು ರಾಜ್ಯದ ಎಲ್ಲಾ ಜಿಲ್ಲೆಗಳ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರಾಂಶುಪಾಲರುಗಳ ಖಾಲಿ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಿ ದಿನಾಂಕ:07/10/2022 ರವರೆಗೆ ಜಿಲ್ಲಾ ಉಪನಿದೇಶಕರ ಮೂಖೇನ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು.

ಸದರಿ ಖಾಲಿ ಹುದ್ದೆ ಮಾಹಿತಿಯನ್ನು ಪರಿಶೀಲಿಸಿ, ಸಂಬಂಧಿಸಿದ ಜಿಲ್ಲೆಯ ಉಪ ನಿರ್ದೇಶಕರ ಕಚೇರಿ ಸಿಬ್ಬಂದಿಯವರು ಪಟ್ಟಿಯಲ್ಲಿರುವ ಮಾಹಿತಿಗೆ Additions or Deletions ಮಾಡಿ ಪೂರಕ ದಾಖಲೆಗಳೊಂದಿಗೆ ಮಾಹಿತಿಯನ್ನು ಕ್ರೋಢೀಕರಿಸಿ ಆಕ್ಷೇಪಣೆ ಸಲ್ಲಿಸಲು ದಿನಾಂಕ: 13-10-2022 ರಿಂದ 21/10/2022ರ ಸಂಜೆ 5 ಗಂಟೆಯವರಿಗೆ ವಿಸ್ತರಿಸಲಾಗಿದೆ. ಸದರಿ ಆಕ್ಷೇಪಣೆಗಳನ್ನು **ಉಪನಿರ್ದೇಶಕರು (ಆಡಳಿತ-1), ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯ, ಮಲ್ಲೇಶ್ವರಂ, ಬೆಂಗಳೂರು,** ಇವರಿಗೆ ಹಾಗೂ ಸ್ಕ್ಯಾನ್ ಪ್ರತಿಯನ್ನು ತಪ್ಪದೆ dpuetransfer22@gmail.com ಇ-ಮೇಲ್‌ಗೆ ಕಳುಹಿಸಿಕೊಡಲು ಈ ಮೂಲಕ ತಿಳಿಸಿದೆ. **<u>ಪ್ರಾಚಾರ್ಯರು ಖಾಲಿ ಹುದ್ದೆ ಮಾಹಿತಿಯನ್ನು ನೇರವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸದೇ ಜಿಲ್ಲಾ ಉಪನಿರ್ದೇಶಕರ ಮುಖೇನ ಸಲ್ಲಿಸಲು ಸಹ ತಿಳಿಸಿದೆ</u>.**

14/10

"ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ"

ನಿರ್ದೇಶಕರ ಪರವಾಗಿ,
ಪದವಿ ಪೂರ್ವ ಶಿಕ್ಷಣ ಇಲಾಖೆ

**ರವರಿಗೆ:**

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಎಲ್ಲಾ ಪ್ರಾಂಶುಪಾಲರುಗಳಿಗೆ – ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು – ಇ-ಆಡಳಿತ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ – ಅಂತರ್ಜಾಲದಲ್ಲಿ ಮಾಹಿತಿಗಳನ್ನು ಅಳವಡಿಸುವ ಬಗ್ಗೆ ಮತ್ತು ಅಗತ್ಯ ಕ್ರಮಕ್ಕೆ.
4. ಸಹಾಯಕ ನಿರ್ದೇಶಕರು – ಗಣಕ ಶಾಖೆ, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ – ಕೌನ್ಸಲಿಂಗ್ ಸಿದ್ಧತೆ ಮತ್ತು ಸಹಕ್ಕಾರಕ್ಕಾಗಿ.
5. ಕಚೇರಿ / ಹೆಚ್ಚುವರಿ ಪ್ರತಿ